# ಬಿಎಂಟಿಸಿಗೆ ಬ್ಯಾಂಕ್ ನೌಕರ ಬಲಿ

▪ **ವಿಕ ಸುದ್ದಿಲೋಕ** ಬೆಂಗಳೂರು

ಎಸ್‌ಬಿಐ ನೌಕರ ಎಚ್.ವೈ. ಮಹೇಶ್ (59), ಬಿಬಿಎಂಪಿ ಕಚೇರಿ ಸಮೀಪದ ಬಾದಾಮಿ ಹೌಸ್ ಕಟ್ಟಡದ ಬಳಿ ಸೋಮವಾರ ಬೆಳಗ್ಗೆ ನಡೆದ ಅಪಘಾತದಲ್ಲಿ ಮೃತಪಟ್ಟಿದ್ದಾರೆ.



ಚನ್ನರಾಯಪಟ್ಟಣ ಮೂಲದ ಅವರು, ಹನುಮಂತನಗರದಲ್ಲಿ ಪತ್ನಿ ಹರಿಣಿ, ಪುತ್ರಿಯರಾದ ನಮ್ರತಾ ಹಾಗೂ ನಮಿತಾ ಜತೆ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಸೇಂಟ್‌ಮಾರ್ಕ್ ರಸ್ತೆಯಲ್ಲಿರುವ ಎಸ್‌ಬಿಐನ ಕೇಂದ್ರ ಕಚೇರಿ ಯಲ್ಲಿ ಹಿರಿಯ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು.

ಭಾನುವಾರದ ರಜೆ ಕಳೆದು ಸೋಮವಾರ ಎಂದಿನಂತೆ ಮಕ್ಕಳಿಗೆ ಟಾಟಾ ಹೇಳಿ ಬ್ಯಾಂಕ್‌ಗೆ ಕೆನೆಟಿಕ್ ಹೊಂಡಾದಲ್ಲಿ ಬೆಳಗ್ಗೆ ಹೊರಟರು. ಸಚ್ಚಿದಾನಂದನಗರದಲ್ಲಿರುವ ತಮ್ಮ ನಿವೇಶನ ಸಮಸ್ಯೆ ಕುರಿತು ಲೋಕಾಯುಕ್ತಕ್ಕೆ ದೂರು ನೀಡಲಾಗಿತ್ತು. ಆ ಬಗ್ಗೆ ವಿಚಾರಿಸಿ ನಂತರ ಬ್ಯಾಂಕ್‌ಗೆ ಹೋಗುವುದಾಗಿ ಸ್ನೇಹಿತರ ಬಳಿ ಹೇಳಿದ್ದರು.

ಕೆನೆಟಿಕ್ ಹೊಂಡಾದಲ್ಲಿ ಹೋಗುತ್ತಿದ್ದ ಅವರಿಗೆ ಹಿಂದಿನಿಂದ ಬಂದ ಬಿಎಂಟಿಸಿ ಬಸ್ (ರೂಟ್ ನಂ-288, ಸಿಟಿ ಮಾರ್ಕೆಟ್‌ನಿಂದ ತಿಂಡ್ಲು) ಬೆಳಗ್ಗೆ 9.50ರ ಸುಮಾರಿಗೆ ಡಿಕ್ಕಿ ಹೊಡೆಯಿತು. ಎಡಗಡೆ ಬಿದ್ದ ಪ್ರಕಾಶ್ ಮೇಲೆಯೇ ಬಸ್ ಚಕ್ರ ಹರಿದಿದ್ದರಿಂದ ಅವರು ಸ್ಥಳದಲ್ಲೇ ಅಸುನೀಗಿದರು. ಗಾಬರಿಗೊಂಡ ಬಸ್ ಚಾಲಕ ಠಾಣೆ ಬಳಿ ನಿಲ್ಲಿಸಿ ಪರಾರಿಯಾಗಿದ್ದಾನೆ. ಬಸ್ ಚಲಾಯಿಸುತ್ತಿದ್ದವ ಮಹಂತಯ್ಯ(26) ಎಂದು ತಿಳಿದುಬಂದಿದೆ.

ಈ ಅಪಘಾತದಿಂದ ಕೆಲ ಕಾಲ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಹಲಸೂರು ಗೇಟ್ ಸಂಚಾರ ಪೊಲೀಸರು ಸ್ಥಳಕ್ಕೆ ಧಾವಿಸಿ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಶವ ಪರೀಕ್ಷೆ ನಡೆಸಿ ವಾರಸುದಾರರಿಗೆ ನೀಡಲಾಗಿದೆ ಎಂದು ಪೊಲೀಸರು ತಿಳಿಸಿದರು.

## ಅಂಗಡಿ, ಮನೆಗಳಲ್ಲಿ ಕಳ್ಳತನ

ಆಭರಣ ಅಂಗಡಿ ಹಾಗೂ ಮನೆಗಳಿಗೆ ನುಗ್ಗಿ ಕಳವು ಮಾಡುತ್ತಿದ್ದವರನ್ನು ರಾಮಮೂರ್ತಿನಗರ ಪೊಲೀಸರು ಬಂಧಿಸಿದ್ದಾರೆ.

ಉಲ್ಲಾಳು ಉಪನಗರದ ಅಸ್ಗರ್ ಅಲಿಯಾಸ್ ಅಪ್ಸರ್ (23), ನೆಲಮಂಗಲ, ಇಸ್ಲಾಂಪುರದ ಫಯಾಜ್ ಅಲಿಯಸ್ ಪಯ್ಯು (20), ನಾಯಂಡಹಳ್ಳಿ, ಅಂಬೇಡ್ಕರ್‌ನಗರದ ಬಿ. ರವಿ (19) ಹಾಗೂ ಶಿವಮೊಗ್ಗ ಜಿಲ್ಲೆಯ ಜೆ.ಪಿ. ವೀರೇಶ (42) ಬಂಧಿತರು. ಆರೋಪಿಗಳಿಂದ 15 ಲಕ್ಷ ರೂ. ಮೌಲ್ಯದ 18 ಕೆ.ಜಿ. ಬೆಳ್ಳಿ ಹಾಗೂ 370 ಗ್ರಾಂ ತೂಕದ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ. ನೆಲಮಂಗಲ ಟೌನ್, ನಗರದ ಜ್ಞಾನಭಾರತಿ, ಕೆ.ಪಿ. ಅಗ್ರಹಾರ, ತಮಿಳುನಾಡಿನ ಡೆಂಕಣಿಕೋಟೆ ಪೊಲೀಸ್ ಠಾಣೆಗಳಲ್ಲಿ ಆರೋಪಿಗಳ ವಿರುದ್ಧ ಪ್ರಕರಣಗಳು ದಾಖಲಾಗಿವೆ. ಜ್ಞಾನಭಾರತಿ, ಚಂದ್ರಾ ಲೇಔಟ್ ಮತ್ತಿತರ ಠಾಣೆಗಳ ವ್ಯಾಪ್ತಿಯಲ್ಲಿ ನಡೆದ ಪ್ರಕರಣಗಳಿಗೆ ಸಂಬಂಧಿಸಿದಂತೆ ಜೈಲನಲ್ಲಿದ್ದಾಗ ಅಸ್ಗರ್ ಹಾಗೂ ಬಿ. ರವಿಗೆ ಮತ್ತೊಬ್ಬ ಆರೋಪಿ ವೀರೇಶ್ ಪರಿಚಯವಾಗಿದ್ದ. ಹೀಗಾಗಿ, ಜೈಲಿನಲ್ಲಿದ್ದ ಅಸ್ಗರ್ ಹಾಗೂ ಫಯಾಜ್‌ನನ್ನು ವೀರೇಶ್ ಜಾಮೀನಿನ ಮೇಲೆ ಬಿಡುಗಡೆ ಮಾಡಿಸಿದ್ದ. ನಂತರ ಎಲ್ಲರೂ ಸೇರಿ ಆಭರಣ ಅಂಗಡಿಗಳಲ್ಲಿ ಕಳವು ಮಾಡಿ ಪೊಲೀಸರಿಗೆ ಸಿಕ್ಕಿಬಿದ್ದರು.

## ಟೆಸ್ಕಾಂ ಕಾರ್ಖಾನೆಯನಲ್ಲಿ ಬೆಂಕಿ

ಎಲೆಕ್ಟ್ರಾನಿಕ್ ಸಿಟಿ 2ನೇ ಹಂತದಲ್ಲಿರುವ ಟೆಸ್ಕಾಂ ಕಾರ್ಖಾನೆಯಲ್ಲಿ ಆಕಸ್ಮಿಕ ಬೆಂಕಿ ಕಾಣಿಸಿಕೊಂಡು ಅಪಾರ ಪ್ರಮಾಣದ ವಸ್ತುಗಳು ಸುಟ್ಟಿವೆ.

ವೀರಸಂದ್ರ ಕೈಗಾರಿಕಾ ಪ್ರದೇಶದಲ್ಲಿರುವ ಟೆಲಿಕಾಂ ಉತ್ಪನ್ನ ತಯಾರಿಕೆ ಕಾರ್ಖಾನೆಯಲ್ಲಿ ಸೋಮವಾರ ರಾತ್ರಿ ಬೆಂಕಿ ಕಾಣಿಸಿಕೊಂಡಿತು. ರಾತ್ರಿ ಪಾಳಿಯಲ್ಲಿದ್ದ ಕೆಲಸಗಾರರು ತಕ್ಷಣ ಹೊರ ಬಂದು ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದರು.

ಅಗ್ನಿಶಾಮಕ ಸಿಬ್ಬಂದಿ ಐದಕ್ಕೂ ಹೆಚ್ಚು ವಾಹನಗಳಲ್ಲಿ ಸ್ಥಳಕ್ಕೆ ಧಾವಿಸಿ ಸುಮಾರು ಒಂದೂವರೆ ಗಂಟೆಗೂ ಹೆಚ್ಚು ಕಾಲ ಶ್ರಮಿಸಿ ಬೆಂಕಿ ನಂದಿಸಿದರು.